121 (254) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ತೋಟಗಾರಿಕಾ ಇಲಾಖೆಯಿಂದ ರೈತರಿಗೆ ಬೆಳೆ ಹಾಗೂ ಇತರೆ ಯೋಜನೆಗಳಿಗೆ ಸಾಲ ಮತ್ತು ಸಹಾಯಧನ ನೀಡುವ ಯೋಜನೆ ಇದೆಯೇ,

ಆ) ಇದ್ದಲ್ಲಿ, ಯಾವ ಯಾವ ಬೆಳೆಗಳಿಗೆ ಎಷ್ಟೆಷ್ಟು ಸಾಲ ಮತ್ತು ಸಹಾಯ ಧನ ನೀಡಲಾಗುವುದು (ವಿವರ ನೀಡುವುದು) ,

ಇ) ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2006–07ರ ಸಾಲಿನಲ್ಲಿ ಈ ವರೆಗೆ ಬೆಳೆಗಳಿಗೆ ಎಷ್ಟೆಷ್ಟು ಸಾಲ ಮತ್ತು ಸಬ್ಸಿಡಿ ನೀಡಲಾಗಿದೆ, (ವಿವರ ನೀಡುವುದು) ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕಾ ಸಚಿವರು)

ಅ) ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಗೆ ಬೆಳೆ ಹಾಗೂ ಇತರೆ ಸಾಲ ನೀಡುವ ಯೋಜನೆ ಇರುವುದಿಲ್ಲ ಆದರೆ, ಸಹಾಯಧನ ನೀಡುವ ಯೋಜನೆಗಳಿವೆ

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ

ಇ) ತೋಟಗಾರಿಕೆಯಿಂದ ನೀಡಲಾದ ಸಬ್ಸಿಡಿ ಒಟ್ಟು ರೂ 12 32 ಲಕ್ಷ ವಿವರಗಳನ್ನು ಕೆಳಕಂಡಂತಿವೆ

(ರೂ ಲಕ್ಷಗಳಲ್ಲಿ)

ಕ್ರ	ಬೆಳೆ / ಯೋಜನೆ	ಸಹಾಯಧನ
1	ಕೋಕೋ ಪ್ರದೇಶ ವಿಸ್ತರಣೆ	1 07
2	ಗೋಡಂಬಿ – ಪ್ರದೇಶ ವಿಸ್ತರಣೆ	9 25
3	ಬಾಳೆ – ಪ್ರದೇಶ ವಿಸ್ತರಣೆ	0 31
4	ಲಾವಂಚ	0 54
5	ತೆಂಗು	0 70
6	ಎ ವಿಶೇಷ ಘಟಕ ಯೋಜನೆ	0 22
	ಬಿ ಮನೆಮುಂದೆ ನೆಡಲು ಕುಟುಂಬ ಒಂದಕ್ಕೆ ತಲಾ 2 ರಂತೆ ತೆಂಗಿನ ಸಸಿ ವಿತರಣೆ	0 04
7	ಎ ಗಿರಜನ ಉಪಯೋಜನೆ	0 25
	ಬಿ ಮನೆಮುಂದೆ ನೆಡಲು ಕುಟುಂಬ ಒಂದಕ್ಕೆ ತಲಾ 2 ರಂತೆ ತೆಂಗಿನ ಸಸಿ ವಿತರಣೆ	0 01
	ಒಟ್ಟು	12 32

ಅನುಬಂಧ

ತೋಟಗಾರಿಕೆ ಇಲಾಖೆಯ ಯೋಜನೆಗಳಡಿ ವಿವಿಧ ಬೆಳೆಗಳಿಗೆ ನೀಡುವ ಸಹಾಯಧನದ ವಿವರಗಳು

ಕ್ರ ಸಂ	ಯೋಜನೆ	ಬೆಳೆಗಳು	ಸಹಾಯಧನ
1	ರಾಷ್ಟ್ರೀಯ ತೋಟಗಾರಿಕೆ ಮಿಷನ್	ಮಾವು, ದ್ರಾಕ್ಷಿ ಮತ್ತು ದಾಳಿಂಬೆ	ಪ್ರದೇಶ ವಿಸ್ತರಣೆಗೆ – ರೂ 22,500 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 4 ಹೆಕ್ಟೇರ್‌ವರೆವಿಗೆ
		ಅನಾನಸ್	ರೂ 15000 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 4 ಹೆಕ್ಟೇರ್‌ವರೆವಿಗೆ
		ಮಾವು ಮತ್ತು ಕಿತ್ತಳೆ	ಪುನಶ್ಚೇತನಕ್ಕೆ – ರೂ 10,000 ಪ್ರತಿ ಹೆಕ್ಟೇರ್‌ಗೆ ಗರಿಷ್ಟ 2 ಹೆಕ್ಟೇರ್‌ವರೆವಿಗೆ
		ಖಾಸಗಿವಲಯದಲ್ಲಿ ಸಣ್ಣ ನರ್ಸರಿಗೆ ಸಹಾಯ	ಶೇ 50ರಷ್ಟು ಅಥವಾ ಗರಿಷ್ಟ ರೂ 15 ಲಕ್ಷ
		ಶುಂರಿ ಮತ್ತು ಕಾಳುಮೆಣಸು	ಪ್ರದೇಶ ವಿಸ್ತರಣೆಗೆ – ರೂ 10,000 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 2 ಹೆಕ್ಟೇರ್‌ವರೆವಿಗೆ
			ಸಂಸ್ಕರಣಾ ಘಟಕ ಸ್ಥಾಪನೆ ಶೇ 25 ರಷ್ಟು
		ಕಾಳುಮೆಣಸು	ಸಸ್ಯಾಭಿವೃದ್ಧಿಗೆ (ನರ್ಸರಿ) ಗರಿಷ್ಟ ರೂ 3 00 ಲಕ್ಷ
		ಗೋಡಂಬಿ	ಪ್ರದೇಶ ವಿಸ್ತರಣೆ (High density)– ರೂ 11,250 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 2

			ಹೆಕ್ಟೇರ್‌ವರೆವಿಗೆ Normal planting – ರೂ 3,600 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 2 ಹೆಕ್ಟೇರ್‌ವರೆವಿಗೆ ನರ್ಸರಿ ಸ್ಥಾಪನೆ (ಸಣ್ಣ) – ರೂ 15 ಲಕ್ಷ ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 1 ಹೆಕ್ಟೇರ್ ಮಾಡಲ್ ನರ್ಸರಿ – (4 ಹೆಕ್ಟೇರ್) ರೂ 9 00 ಲಕ್ಷ ಪುನಶ್ಚೇತನ – ರೂ 15,000 ಪ್ರತಿ ಹೆಕ್ಟೇರ್‌ಗೆ, ಗರಿಷ್ಟ 2 ಹೆಕ್ಟೇರ್ ಪ್ರಾತ್ಯಕ್ಷತೆ – ಗರಿಷ್ಟ ರೂ 22,406 ಪ್ರತಿ ಹೆಕ್ಟೇರ್‌ಗೆ
		ಕೋಕೋ	ಪ್ರದೇಶ ವಿಸ್ತರಣೆಗೆ – ರೂ 7,500 ಪ್ರತಿ ಹೆಕ್ಟೇರ್‌ಗೆ ಗರಿಷ್ಟ 2 ಹೆಕ್ಟೇರ್‌ವರೆವಿಗೆ ಸಂಸ್ಕರಣಾ ಘಟಕ – ಗರಿಷ್ಟ ರೂ 100 ಲಕ್ಷ
		ಪುಷ್ಪ ಬೆಳೆ	
		ಕಟ್ ಫ್ಲವರ್ಸ್ – ಗುಲಾಬಿ, ಆಂಥೂರಿಯಂ, ಅರ್ಕಿಡ್, ಬರ್ಡ್ ಆಫ್ ಪ್ಯಾರಡೈಸ್, ಜರ್ಬೆರಾ, ಕಾರ್ನೇಷನ್	ಪ್ರತಿ ಯುನಿಟ್‌ಗೆ ರೂ 35,000 (500 ಚ ಮೀ ಅಥವಾ 1 ಎಕರೆ)

		ಬಲ್‌ಬಸ್ ಫ್ಲವರ್ಸ್ – ಸುಗಂಧರಾಜ, ಗ್ಲಾಡಿಯೋಲಸ್	ಪ್ರತಿ ಯುನಿಟ್‌ಗೆ ರೂ 45,000 (1/2 ಎಕರೆ ಯಿಂದ 1 ಎಕರೆ)
		ಲೂಸ್‌ಫ್ಲವರ್ಸ್ – ಕನಕಾಂಬರ, ಚೆಂಡುಹೂ, ಉಡುಪಿಮಲ್ಲಿಗೆ, ಆಂಬೂರುಮಲ್ಲಿಗೆ, ಸೇವಂತಿಗೆ, ಆಸ್ಟೆರ್	ಪ್ರತಿ ಯುನಿಟ್‌ಗೆ ರೂ 12,000 (1/2 ಎಕರೆಯಿಂದ 1 ಎಕರೆ)
		ಔಷಧಿ ಮತ್ತು ಸುಗಂಧ ಬೆಳೆಗಳು	
		ಪಚೋಲಿ, ರೋಸ್‌ಮೇರಿ, ಜಿರೇನಿಯಂ	ಪ್ರತಿ ಎಕರೆಗೆ ರೂ 4,500 ಗರಿಷ್ಟ 5 ಎಕರೆ
		ದವನ, ತುಳಸಿ	ಪ್ರತಿ ಎಕರೆಗೆ ರೂ 3,000 ಗರಿಷ್ಟ 5 ಎಕರೆ
		ನಿಂಬೆಹುಲ್ಲು, ಪಾಮರೋಸಾ, ಸಿಟ್ರೋನೆಲ್ಲಾ, ಲಾವಂಚ	ಪ್ರತಿ ಎಕರೆಗೆ ರೂ 3,000 ಗರಿಷ್ಟ 5 ಎಕರೆ
		ಅಶ್ವಗಂಧ, ಕಿರುನೆಲ್ಲಿ, ಮಕಾಯ್, ದವನ, ಕುದುರೆ ಮಸಾಲೆ	ಪ್ರತಿ ಎಕರೆಗೆ ರೂ 3,000 ಗರಿಷ್ಟ 5 ಎಕರೆ
		ಮಾಕಂದಿ ಬೇರು	ಪ್ರತಿ ಎಕರೆಗೆ ರೂ 4,500 ಗರಿಷ್ಟ 5 ಎಕರೆ
		ಮರ, ಬಳ್ಳಿ, ಪೊದೆ ಜಾತಿಯ ಗಿಡಗಳು ಮತ್ತು ಹಿಪ್ಪಲಿ	ಪ್ರತಿ ಎಕರೆಗೆ ರೂ 4,500 ಗರಿಷ್ಟ 5 ಎಕರೆ

		ರೈತರ ತೋಟಗಳಲ್ಲಿ ಕೃಷಿ ಹೊಂಡ / ಸಮುದಾಯ ನೀರಿನ ಟ್ಯಾಂಕ್ ನಿರ್ಮಾಣ	ಕನಿಷ್ಟ ರೂ 25,000 ರಿಂದ ಗರಿಷ್ಟ ರೂ 10 00 ಲಕ್ಷದವರೆಗೆ
		ಪ್ಯಾಕ್‌ಹೌಸ್ ನಿರ್ಮಾಣಕ್ಕೆ ಸಹಾಯಧನ	ಶೇ 25 ಅಧವಾ ಗರಿಷ್ಟ ರೂ 62,500 ಪ್ರತಿ ಘಟಕಕ್ಕೆ
		ಹಣ್ಣು ಮತ್ತು ತರಕಾರಿಗಳನ್ನು ಸಾಗಾಣಿಕೆ ಮಾಡುವ ಸಲುವಾಗಿ ಪ್ಲಾಸ್ಟಿಕ್ ಕ್ರೇಟ್ಸ್‌ಗಳ ಪೂರೈಕೆ	ಪ್ರತಿ ಕ್ರೇಟ್‌ಗೆ ಶೇ 50 ರಷ್ಟು ಅಧವಾ ಗರಿಷ್ಟ ರೂ 80 ರವರೆಗೆ ಸಹಾಯಧನ
2	ಸೂಕ್ಷ್ಮ ನೀರಾವರಿ ಯೋಜನೆ	ಕಾಫಿ, ಟೀ, ರಬ್ಬರ್ ಮತ್ತು ತಾಳೆಬೆಳೆ ಹೊರತುಪಡಿಸಿ ಉಳಿದ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ	ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಶೇ 100ರಷ್ಟು ಸಹಾಯಧನ ಹಾಗೂ ಉಳಿದ ಜಿಲ್ಲೆಗಳಲ್ಲಿ ಶೇ 75 ರಷ್ಟು ಸಹಾಯಧನ
3	ರೈತರ ಕ್ಷೇತ್ರಗಳಲ್ಲಿ ಇಸ್ರೇಲಿ ತಂತ್ರಜ್ಞಾನದ ಅಳವಡಿಕೆಗಾಗಿ ಪ್ರಾಯೋಗಿಕ ಯೋಜನೆ	ಅಧಿಕ ಮೌಲ್ಯದ ಹಣ್ಣು ಮತ್ತು ತರಕಾರಿ ಬೆಳೆಗಳಿಗೆ	ಪ್ರತಿ ಎಕರೆಗೆ ಗರಿಷ್ಟ ರೂ 70,000 ಸಹಾಯಧನ

4	ತೋಟಗಾರಿಕೆಯಲ್ಲಿ ಸಂಸ್ಕರಣೆ	ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಸಂಸ್ಕರಣಾ ಘಟಕ ಸ್ಥಾಪನೆ	ನೆರವಿನ ಪ್ರಮಾಣ ಕೇಂದ್ರ ಸರ್ಕಾರದಿಂದ 25%, ರಾಜ್ಯ ಸರ್ಕಾರದಿಂದ 15% ಗರಿಷ್ಟ ರೂ 80 00 ಲಕ್ಷಗಳವರೆಗೆ
5	ತಾಳೆಬೆಳೆ ಅಭಿವೃದ್ಧಿ ಯೋಜನೆ	ತಾಳೆಬೆಳೆ ಬೇಸಾಯಕ್ಕೆ	ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 15,500 ಸಹಾಯಧನ
		ತಾಳೆ ಸಸಿಗಳ ಸಹಾಯಧನ	ಶೇ 75 ಅಥವಾ ಗರಿಷ್ಟ ರೂ 7,500 ಪ್ರತಿ ಹೆಕ್ಟೇರ್‌ಗೆ
		ಡೀಸಲ್ ಪಂಪ್‌ಸೆಟ್ ಕೊಳ್ಳಲು	ಶೇ 50 ಅಥವಾ ಗರಿಷ್ಟ ರೂ 10,000
		ಹನಿನೀರಾವರಿ	ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 5,200 ಸಹಾಯಧನ
6	ತೆಂಗು ಅಭಿವೃದ್ಧಿ ಮಂಡಳಿ ಅನುದಾನದ ಸಮಗ್ರ ತೆಂಗು ಬೇಸಾಯ ಯೋಜನೆ	ಹೊಸ ಪ್ರಾತ್ಯಕ್ಷತೆ ಸ್ಥಾಪನೆ	ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 17,500
		ಸಾವಯವ ಗೊಬ್ಬರ ಘಟಕದ ಸ್ಥಾಪನೆ	ಪ್ರತಿ ಹೆಕ್ಟೇರ್‌ಗೆ ಗರಿಷ್ಟ ರೂ 20,000
		ರೋಗಕ್ಕೆ ತುತ್ತಾದ ತೆಂಗಿನ ಮರಗಳ ನಿರ್ವಹಣೆ	ಪ್ರತಿ ಮರಕ್ಕೆ ಗರಿಷ್ಟ ರೂ 250